# ರಾಜಾಧಿರಾಜ

ಒಂದಾನೊಂದು ಊರಿನಲ್ಲಿ ಒಬ್ಬ ರಾಜನಿದ್ದ. ಪ್ರಜೆಗಳಿಗೆ ಅವನನ್ನು ಕಂಡರೆ ಬಹಳ ಭಯ ಭಕ್ತಿ. ರಾಜನನ್ನು ಕಂಡ ಕೂಡಲೆ ‘ರಾಜಾಧಿರಾಜ ಬಹು ಪರಾಕ್’ ಎಂದು ತಲೆ ಬಗ್ಗಿಸಿ ನಮಸ್ಕರಿಸುತ್ತಿದ್ದರು. ಆದರೆ ಅದೇ ಊರಿನಲ್ಲಿದ್ದ ಒಬ್ಬನು ಮಾತ್ರ ‘ದೇವರಿಗಿಂತ ದೊಡ್ಡವರಿಲ್ಲ. ದೇವರೇ ರಾಜಾಧಿರಾಜ’ ಎನ್ನುತ್ತಿದ್ದನು. ರಾಜನೆದುರಿನಲ್ಲೆ ಇದು ಕೆಲವು ಬಾರಿ ಪುನರಾವರ್ತನೆಯಾದಾಗ ರಾಜನಿಗೆ ಸಹಜವಾಗಿಯೇ ಸಿಟ್ಟು ಬಂದಿತು. ಹೇಗಾದರೂ ಈ ಮನುಷ್ಯನಿಗೆ ಬುದ್ಧಿ ಕಲಿಸಬೇಕೆಂದುಕೊಂಡ ರಾಜ.

ರಾಜ ಒಂದು ದಿನ ಆಸ್ಥಾನಕ್ಕೆ ಆ ಮನುಷ್ಯನನ್ನು ಕರೆಸಿದ. ‘ಇದನ್ನು ನಿನ್ನ ಬಳಿ ಜೋಪಾನವಾಗಿ ಇಟ್ಟುಕೊಂಡಿರು’ ಎಂದು ಒಂದು ಪುಟ್ಟ ಬಂಗಾರದ ಉಂಗುರವನ್ನು ಕೊಟ್ಟ. ಆ ಮನುಷ್ಯ ಅದನ್ನು ಒಂದು ಪುಟ್ಟದಾದ ಧಾನ್ಯದ ಚೀಲದಲ್ಲಿ ಹಾಕಿ, ಸರಿಯಾಗಿ ಎತ್ತಿಡುವಂತೆ ಹೇಳಿ ಹೆಂಡತಿಗೆ ಕೊಟ್ಟನು.



ಮತ್ತೆ ಒಂದು ವಾರದ ನಂತರ ರಾಜ ಆ ಮನುಷ್ಯನನ್ನು ಕರೆಸಿ, ದೂರದ ಹಳ್ಳಿಯಿಂದ ಕೆಲವು ಕೆಲಸಗಾರರನ್ನು ಕರೆ ತರುವಂತೆ ಹೇಳಿ ಕಳುಹಿಸಿದ. ಅವನು ಅತ್ತ ಹೋದ ತಕ್ಷಣ ಅವನ ಹೆಂಡತಿಗೆ ಆ ಉಂಗುರವನ್ನು ತಂದು ಕೊಡುವಂತೆ ಆಜ್ಞಾಪಿಸಿದ. ಅವಳಿಗೆ ಸ್ವಲ್ಪ ದುಡ್ಡು ಕೊಟ್ಟು ಗಂಡನಿಗೆ ಈ ಬಗ್ಗೆ ಏನೂ ಹೇಳದಿರುವಂತೆ ಎಚ್ಚರಿಸಿದ. ಬಳಿಕ ಒಬ್ಬ ಸೇವಕನನ್ನು ಕರೆದು, ಉಂಗುರವಿದ್ದ ಆ ಪುಟ್ಟ ಚೀಲವನ್ನು ಕೊಟ್ಟು ಎಲ್ಲಾದರೂ ದೂರ ಎಸೆದು ಬಾ ಎಂದು ಹೇಳಿದ. ಆ ಸೇವಕ ದೂರದಲ್ಲಿದ್ದ ಒಂದು ನದಿಯಲ್ಲಿ ಅದನ್ನು ಎಸೆದು ಬಂದ. ತಕ್ಷಣವೇ ಒಂದು ದೊಡ್ಡ ಮೀನು ಅದನ್ನು ನುಂಗಿ ಬಿಟ್ಟಿತು.

ಆ ಮನುಷ್ಯ ಅದೇ ದಾರಿಯಲ್ಲಿ ವಾಪಾಸಾಗುತ್ತಿದ್ದಾಗ, ಜೊತೆಯಲ್ಲಿದ್ದವರು ನದಿಯಲ್ಲಿ ಮುಖ ತೊಳೆದುಕೊಳ್ಳುತ್ತಾ ಮೀನು ಹಿಡಿಯಲು ಆಸಕ್ತಿ ತೋರಿಸಿದರು. ಅವನೂ ಅವರೊಡನೆ ಮೀನು ಹಿಡಿಯಲು ಕುಳಿತ. ಸಿಕ್ಕ ಒಂದು ದೊಡ್ಡ ಮೀನನ್ನು ಮನೆಯಲ್ಲಿಟ್ಟು ರಾಜನನ್ನು ಕಾಣಲು ಬಂದ. ಆಗ ರಾಜ ಅವನಿಗೆ ತಾನು ಕೊಟ್ಟಿದ್ದ ಉಂಗುರವನ್ನು ತಂದು ಕೊಡುವಂತೆ ಹೇಳಿದ. ಆ ಮನುಷ್ಯ ಮನೆಗೆ ಬಂದು ಹೆಂಡತಿಯನ್ನು ಕೇಳಲು, ಅವಳು ಅದು ಎಲ್ಲೂ ಕಾಣುತ್ತಿಲ್ಲ ಎಂದು ಅಳುತ್ತಾ ಹೇಳಿದಳು.

ಈಗೇನು ಮಾಡುವುದು ಎಂದು ಚಿಂತಾಕ್ರಾಂತನಾದ ಅವನನ್ನು ಮಗನ ಕೂಗು ಎಚ್ಚರಿಸಿತು. ಮಗ, ‘ಅಪ್ಪಾ, ನೀನು ತಂದಿದ್ದ ಮೀನನ್ನು ಕೊಯ್ದೆ. ಅದರ ಹೊಟ್ಟೆಯಲ್ಲಿ ಏನೋ ಇದೆ. ಬಾ ನೋಡು’ ಎಂದಾಗ ಒಳಗೆ ಹೋಗಿ ನೋಡಿದ. ಉಂಗುರವಿಟ್ಟಿದ್ದ ಪುಟ್ಟ ಚೀಲವನ್ನು ಮೀನಿನ ಹೊಟ್ಟೆಯಲ್ಲಿ ನೋಡಿ ಆಶ್ಚರ್ಯವಾಯಿತು. ಬಿಚ್ಚಿ ನೋಡಿದಾಗ ಉಂಗುರ ಕಾಣಿಸಿತು. ಸಂತೋಷದಿಂದ ‘ದೇವರೇ ರಾಜಾಧಿರಾಜ’ ಎಂದು ಹೇಳಿಕೊಳ್ಳುತ್ತಾ, ರಾಜನಿಗೆ ಉಂಗುರವನ್ನು ತಂದು ಕೊಟ್ಟ. ರಾಜನಿಗೆ ಬಹಳವೇ ಆಶ್ಚರ್ಯವಾಗಿ ಎಲ್ಲಾ ವಿವರಿಸುವಂತೆ ಕೇಳಿದ. ಆ ಮನುಷ್ಯ ನಡೆದದ್ದನ್ನೆಲ್ಲಾ ಹೇಳಿದ. ಅದನ್ನೆಲ್ಲಾ ಕೇಳಿದ ರಾಜ ಸಂತೋಷದಿಂದ, ಹೌದು, ‘ದೇವರೇ ರಾಜಾಧಿ ರಾಜ’ ಎಂದು ಜೋರಾಗಿ ಕೂಗಿದ. ಆಸ್ಥಾನದಲ್ಲಿದ್ದ ಎಲ್ಲರೂ ಎದ್ದು ನಿಂತು ‘ದೇವರೇ ರಾಜಾಧಿರಾಜ’ ಎಂದು ರಾಜನೊಟ್ಟಿಗೆ ಜೈಕಾರ ಮಾಡಿದರು.

**ಸಂಗ್ರಹ: ಉಮಾ ಅಣ್ಣಿಗೇರಿ, ಹುಬ್ಬಳ್ಳಿ**